# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IV A | ಬೆಂಗಳೂರು, ಮಂಗಳವಾರ, ೧೧, ಅಕ್ಟೋಬರ್, ೨೦೨೨(ಆಶ್ವಯುಜ, ೧೯, ಶಕವರ್ಷ, ೧೯೪೪)<br>BENGALURU, TUESDAY, 11, OCTOBER, 2022(AASHWAYUJA,19, SHAKAVARSHA, 1944) | ನಂ. ೫೦೬<br>No. 506 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 18 ಶಾಸನ 2022, ಬೆಂಗಳೂರು, ದಿನಾಂಕ: 11.10.2022**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2022 ಇದಕ್ಕೆ 2022 ರ ಅಕ್ಟೋಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2022 ರ ಕರ್ನಾಟಕ ಅಧಿನಿಯಮ ಸಂಖ್ಯೆ: 27 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ- IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 27**

(2022ರ ಅಕ್ಟೋಬರ್ ತಿಂಗಳ 11ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2022

(2022ರ ಅಕ್ಟೋಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 22ನೇ ಆಗಸ್ಟ್ 2022 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 121ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 121ನೇ ಪ್ರಕರಣದಲ್ಲಿ,-

(ಎ) (i)ನೇ ಖಂಡದಲ್ಲಿ "ಎರಡು ಲಕ್ಷಗಳನ್ನು" ಎಂಬ ಪದಗಳ ಬದಲಾಗಿ "ಎರಡು ಲಕ್ಷ ಮೂವತ್ತು ಸಾವಿರವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) (ii)ನೇ ಖಂಡದಲ್ಲಿ "ಎರಡು ಲಕ್ಷಗಳನ್ನು" ಎಂಬ ಪದಗಳ ಬದಲಾಗಿ "ಎರಡು ಲಕ್ಷ ಮೂವತ್ತು ಸಾವಿರವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 160ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 160ನೇ ಪ್ರಕರಣದಲ್ಲಿ,-

(ಎ) "ಇಪ್ಪತ್ತಕ್ಕಿಂತಲೂ ಕಡಿಮೆಯಲ್ಲದಂತೆ ವ್ಯಕ್ತಿಗಳಿರತಕ್ಕದ್ದು" ಎಂಬ ಪದಗಳ ಬದಲಾಗಿ "ಇಪ್ಪತ್ತೈದಕ್ಕಿಂತಲೂ ಕಡಿಮೆಯಲ್ಲದಂತೆ ಸದಸ್ಯರಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಏಳು ಲಕ್ಷಕ್ಕಿಂತ ಹೆಚ್ಚಿನ ಆದರೆ ಒಂಬತ್ತು ಲಕ್ಷದ ಐವತ್ತು ಸಾವಿರವನ್ನು ಮೀರಿರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯ ಸಂದರ್ಭದಲ್ಲಿ, ಇಪ್ಪತ್ತೆಂಟು ಚುನಾಯಿತ ಸದಸ್ಯರಿರತಕ್ಕದ್ದು."

**4. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ ಸಂ. 06) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

# PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 18 SHASHANA 2022, BENGALURU, DATED: 11.10.2022

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ( ಎರಡನೇ ತಿದ್ದುಪಡಿ) ಅಧಿನಿಯಮ, 2022 (2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 27) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO. 27 OF 2022

**(First Published in the Karnataka Gazette Extra-ordinary on the 11th day of October, 2022)**

### THE KARNATAKA GRAM SWARAJ AND PANCHAYAT RAJ (SECOND AMENDMENT) ACT, 2022

(Received the assent of Governor on the 11th day of October, 2022)

An Act further to amend the Karnataka Gram Swaraj and Panchayat Raj Act, 1993.

Whereas, it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the seventy third year of the Republic of India, as follows:-

**1. Short title and commencement.-** (1) This Act may be called the Karnataka Gram Swaraj and Panchayat Raj (Second Amendment) Act, 2022.

(2) It shall be deemed to have come into force with effect from the 22nd day of August, 2022.

**2. Amendment of section 121.-** In section 121 of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the Principal Act),-

(a) in clause (i), for the words “two lakhs” the words “two lakh thirty thousand” shall be substituted; and

(b) in clause (ii), for the words “two lakhs” the words “two lakh thirty thousand” shall be substituted.

**3. Amendment of section 160.-** In section 160 of the Principal Act,-

(a) for the words “not less than twenty persons” the words “not less than twenty five members” shall be substituted; and

(b) after the proviso, the following shall be inserted, namely:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"Provided further that, in case of a district having rural population of more than seven lakhs but not more than nine lakhs fifty thousand there shall be twenty eight elected members."

**4. Repeal and savings.-** (1) The Karnataka Gram Swaraj and Panchayat Raj (Amendment) Ordinance, 2022 (Karnataka Ordinance 06 of 2022) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under the principal Act, as amended by this Act.

The above translation of ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2022 (2022 ರ ಕರ್ನಾಟಕ ಅಧಿನಿಯಮ ಸಂಖ್ಯೆ: 27) be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE